ಹೊಳೆನರಸೀಪುರ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ

**ಸಿ.ಸಿ. ನಂ.362/2022**

ಪಿರ್ಯಾದುದಾರರು : ಸರ್ಕಾರದ ಪರವಾಗಿ- ಹೊಳೆನರಸೀಪುರ ನಗರ ಪೋಲಿಸರು

ವಿರುದ್ಧ

ಆಪಾದಿತರು : 1. ನಟರಾಜ ಕೆ.ವಿ ಬಿನ್ ಮಹದೇವಪ್ಪ ಉಃ ವೀರಪ್ಪ, 45 ವರ್ಷ,
ವಾಸಃ ಕಾರ್ಯಾಲಯ ಬಡಾವಣೆ,
ಹೊಳೆನರಸೀಪುರ ಟೌನ್.

:- ದೋಷಾರೋಪಣೆ :-

ಶ್ರೀ ಪ್ರವೀಣ್ ಆರ್ ಜೆ ಎಸ್ ಬಿ. ಎ., ಎಲ್. ಎಲ್.ಬಿ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳೆನರಸೀಪುರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಹೊಳೆನರಸೀಪುರ ನಗರ ಠಾಣಾ ವ್ಯಾಪ್ತಿಗೆ ಸೇರಿದ ಹೊಳೆನರಸೀಪುರ ಟೌನ್ ಅರಕಲಗೂಡು ರಸ್ತೆಯಲ್ಲಿರುವ ಆರ್ ಆರ್ ಆರ್ ಡಾಬಾ ಪಕ್ಕದಲ್ಲಿನ ಕಡವಿನಕೋಟೆ ಹೋಗುವ ಮಣ್ಣಿನ ರಸ್ತೆಯ ಪಕ್ಕದಲ್ಲಿ ದಿನಾಂಕ 31.12.2021 ರಂದು ರಾತ್ರಿ 10-00 ಗಂಟೆಗೆ ಚಾಸಾ 1 ರವರಿಗೆ ವಾಯು ವಿಹಾರಕ್ಕೆ ಹೋಗುತ್ತಿದ್ದಾಗ ನಿದರ್ಶನ್ ಉಃ ಶ್ರೀನಿಧಿ ಮತ್ತು ನಟರಾಜ್ ರವರ ಹಣಕಾಸಿನ ವಿಚಾರವಾಗಿ ಮಾತಿಗೆ ಮಾತು ಬೆಳೆದು ಜಗಳವಾಡುತ್ತಿದ್ದಾಗ ಚಾಸಾ 1 ರವರು ದಿನಾಂಕ 01.01.2022 ರಂದು ಸುಮಾರು 12-30 ರ ಗಂಟೆಯಲ್ಲಿ ಜಗಳ ಬಿಡಿಸಲು ಬಂದಾಗ ಮೇಲ್ಕಂಡ ಆರೋಪಿಯಾದ ನೀವು ಚಾಸಾ 1 ರವರಿಗೆ ನೀನು ಶ್ರೀನಿಧಿಯ ಪರವಾಗಿ ಬಂದಿದ್ದೀಯಾ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸ್ಥಳದಲ್ಲಿ ಅಶಾಂತಿ ಉಂಟುಮಾಡುವುದರ ಮೂಲಕ ಭಾರತ ದಂಡ ಸಂಹಿತೆ ಕಲಂ 504 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

ಮುಂದುವರೆದು ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲ್ಕಂಡ ಆರೋಪಿಯಾದ ನೀವು ಜಗಳ ತೆಗೆದು, ಬಿಯರ್ ಬಾಟಲಿಯಿಂದ ಚಾಸಾ 1 ರವರ ಎಡಭುಜದ ಸಮೀಪಕ್ಕೆ ಹಾಗೂ ಎಡಕೈಗೆ, ಬಲಭುಜದ ಸಮೀಪಕ್ಕೆ ಹಾಗೂ ಕಲ್ಲಿನಿಂದ ಚಾಸಾ 1 ರವರ ಬಲಕಾಲಿನ ಮಂಡಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡುವುದರ ಮೂಲಕ ಭಾರತ ದಂಡ ಸಂಹಿತೆ ಕಲಂ 324 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

| | | |
|---|---|---|
| **ಪ್ರಶ್ನೆ-1** | | ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದಿರಾ? ಅದು ನಿಮಗೆ ತಿಳಿಯಿತೇ? |
| **ಆರೋಪಿಯ ಉತ್ತರ** | | |
| **ಪ್ರಶ್ನೆ-2** | | ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ? |
| **ಆರೋಪಿಯ ಉತ್ತರ** | | |

**ಮೇಲ್ಕಂಡಂತೆ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಿರುತ್ತೇನೆ.**

**ತಾ : 17.03.2023**
**ಸ್ಥಳ : ಹೊಳೆನರಸೀಪುರ.** **ಜೆಎಂಎಫ್‌ಸಿ, ಹೊಳೆನರಸೀಪುರ.**